# ಆಹಾ ಸುದ್ದಿ!

★ ಸಸಿತೋಟ

ಪ್ಯಾರಿಸ್‌ನಲ್ಲಿ ಹೊಸ ಆಟ ಶುರುವಾಗಿದೆ. ಕೊಡಲಿ ಎಸೆಯುವ ಈ ಆಟಕ್ಕೆ ಲೆಸ್ ಕಾಗ್ನೀಸ್ ಎಂದು ಹೆಸರಿಡಲಾಗಿದೆಯಂತೆ. ಕೊಡಲಿ, ಈಟಿ ಎಸೆತ, ಬಿಲ್ಲು– ಬಾಣ, ಗದಾಯುದ್ಧ... ಈ ವಿಷಯದಲ್ಲಾದರೂ ರಿವರ್ಸ್ ಗೇರ್‌ನಲ್ಲಿ ಹೋಗುತ್ತಿದ್ದೇವೆ.




ಪೋಲೆಂಡ್‌ನ ಕಾಲ್ ಸೆಂಟರ್ ಕಚೇರಿಯೊಂದರಲ್ಲಿ ಉದ್ಯೋಗಿಗಳ ನೈತಿಕತೆಯನ್ನು ಹೆಚ್ಚಿಸಲು ಮಹಿಳಾ ಉದ್ಯೋಗಿಯೊಬ್ಬಳು ನಗ್ನಳಾಗಿ ಓಡಾಡಿದಳಂತೆ. ಆಕೆಯ ಬಾಸ್ ಒಪ್ಪಿಗೆ ಮೇರೆಗೆ ಈ ಪ್ರದರ್ಶನ ನಡೆದಿದ್ದು, ವಿಡಿಯೋ ಬಹಿರಂಗವಾದಾಗ ಆಕೆ ರಾಜೀನಾಮೆ ನೀಡಿದಳಂತೆ. ಉದ್ಯೋಗಿಗಳು ಈಗ ಆಕೆಯನ್ನು ಮರೆತು ನೈತಿಕತೆ ಹಾಗೂ ಅನೈತಿಕತೆ ಬಗ್ಗೆ ಮಾತನಾಡುತ್ತಿರಬಹುದು.



ಕರಾಚಿಯಲ್ಲಿ ಇತ್ತೀಚೆಗೆ ಸಾರ್ವಜನಿಕ ಕಲಾಕೃತಿಗಳ ಪ್ರದರ್ಶನ ನಡೆಯಿತು. 'ಪರಿಸ್ಥಿತಿ 101' ಎಂದು ಪ್ರದರ್ಶನಕ್ಕೆ ಹೆಸರಿಡಲಾಗಿತ್ತಂತೆ. ನಿಜಕ್ಕೂ ಕಲಾಕೃತಿಗೆ ರೂಪದರ್ಶಿಗಳಾಗಿದ್ದವರ ಪರಿಸ್ಥಿತಿ ಅಧೋಗತಿ.

ಈತ ಆಂಧ್ರಪ್ರದೇಶದ ಪ್ರಭಾಕರ ರೆಡ್ಡಿ. ಗಿನ್ನೆಸ್ ದಾಖಲೆಗಾಗಿ ಬರಿಗೈಲಿ ಒಂದು ನಿಮಿಷದಲ್ಲಿ 212 ಅಕ್ರೂಟು (ವಾಲ್‌ನಟ್)ಗಳ ಚಿಪ್ಪುಗಳನ್ನು ಒಡೆದು ಹಾಕಿದನಂತೆ. ಒಂದೇ ಒಂದು ಷರತ್ತೆಂದರೆ ಹೊರಗಿನ ಚಿಪ್ಪು ಕೇವಲ ಎರಡು ಹೋಳುಗಳಾಗಬೇಕು ಅಷ್ಟೆ.





ಚೀನಾದಲ್ಲಿ ಕೆಲವು ಪ್ರದೇಶಗಳಲ್ಲಿ ಈಗ ವಿಪರೀತ ಚಳಿ. ಮನುಷ್ಯರಿಗಷ್ಟೇ ಅಲ್ಲ, ಮರಗಳಿಗೂ ಉಣ್ಣೆಯ ಬಟ್ಟೆ, ಸ್ವೆಟರ್‌ಗಳನ್ನು ಹಾಕಲಾಗಿದೆಯಂತೆ. ಬೀದಿ ನಾಯಿಗಳನ್ನು ಭಕ್ಷಿಸುವವರಿಗೆ ಬೀದಿ ಬದಿಯ ಮರಗಳ ಬಗ್ಗೆಯಾದರೂ ಕರುಣೆ ಇದೆಯಲ್ಲ...

ಜನರಿಗೆ ಮನುಷ್ಯರಿಗಿಂತ ನಾಯಿಗಳ ಬಗ್ಗೆ ಬಹಳ ಅನುಕಂಪವಂತೆ. ಹೀಗಂತ ಅಧ್ಯಯನವೊಂದು ಹೇಳಿದೆ. ವ್ಯಕ್ತಿಯೊಬ್ಬ ಅಪಘಾತದಿಂದ ಕಾಲು ಮುರಿದುಕೊಂಡು ನರಳುತ್ತಿದ್ದರೂ ನೋಡದ ಜನ ನಾಯಿಯೊಂದು ಗಾಯಗೊಂಡು ಬಿದ್ದರೆ ಕರುಣೆ ತೋರುತ್ತಾರಂತೆ. ನಾಯಿಯನ್ನು ಪ್ರಾಣಿಯಂತೆ ಕಾಣದೆ ತುಪ್ಪಳದ ಮರಿ ಎಂಬುದೇ ಇದಕ್ಕೆ ಕಾರಣವಂತೆ. ಕೇಳಿಸಿತೇ ಹುಲು ಮಾನವ!